# ವಾರ್ತಾ ವಿಶ್ಲೇಷಣೆ

## ಧರ್ಮದಲ್ಲಿ ಪ್ರಜಾಸತ್ತೆ

“ಸತ್ಯಸಾಕ್ಷಾತ್ಕಾರವೇ ಧರ್ಮ” ಎಂದು ಸ್ವಾಮಿ ವಿವೇಕಾನಂದರು ಹೇಳಿದರು. ಆದರೆ ಧರ್ಮದ ಈ ಮುಖ್ಯ ಆದರ್ಶವನ್ನು ಕಡೆಗಣಿಸಿದಾಗ ಬೇರೆ ಅನೇಕ ಗೌಣ ವಿಷಯಗಳು ಮತ್ತು ಧರ್ಮಕ್ಕೆ ಸಂಬಂಧಿಸದ ವಿಷಯಗಳು ಧರ್ಮದ ಪ್ರಧಾನ ಅಂಶಗಳಾಗಿಬಿಡುತ್ತವೆ.

ಬ್ರಸೆಲ್ಸ್ (*Brussels*) ಆರ್ಚ್ ಬಿಷಪ್ ಕಾರ್ಡಿನಲ್ ಗಾಡ್‌ಫ್ರೀಡ್ ಡನ್ನೀಲ್ಸ್ (Godfried Danneels) ಅವರು ವ್ಯಕ್ತಿಸ್ವಾತಂತ್ರ್ಯದ ವಿಷಯವಾಗಿ ರೋಮನ್ ಕ್ಯಾಥೋಲಿಕ್ ಅಧಿಕಾರಿಶಾಹಿಯನ್ನು ತೀವ್ರವಾಗಿ ಖಂಡಿಸಿದ್ದಾರೆ. ವ್ಯಾಟಿಕನ್‌ನಲ್ಲಿ ನಿಜವಾದ ಚರ್ಚೆಗೆ ಅವಕಾಶವೇ ಇಲ್ಲವೆಂದು ಅವರು ಆರೋಪಿಸಿದ್ದಾರೆ. ಅನೇಕರು ಸ್ಥಾನಚ್ಯುತಿಯ ಭಯದಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದೇ ಇಲ್ಲ. ಜಗತ್ತಿನ ವಿವಿಧ ಭಾಗದ ಬಿಷಪ್‌ಗಳ ನಡುವೆ ಸಾಕಷ್ಟು ವಿಚಾರ ವಿನಿಮಯಕ್ಕೆ ಅವಕಾಶವಿರಬೇಕು, ಪೋಪರು ಎಲ್ಲರ ಅಭಿಪ್ರಾಯವನ್ನು ಸ್ವೀಕರಿಸಿ ನಿರ್ಣಯ ತೆಗೆದುಕೊಳ್ಳಬೇಕು ಮತ್ತು ಅಧಿಕಾರದ ವಿಕೇಂದ್ರೀಕರಣವಾಗಬೇಕು ಎಂದು ಅವರು ಅಭಿಪ್ರಾಯ ಪಡುತ್ತಾರೆ. “ಚರ್ಚಿನ ಉತ್ತಮ ಆಡಳಿತಕ್ಕೆ ವಾಕ್‌ಸ್ವಾತಂತ್ರ್ಯ ಅತ್ಯಂತ ಆವಶ್ಯಕ” ಎಂದು ಅವರು ಹೇಳುತ್ತಾರೆ. ಇತ್ತೀಚೆಗೆ ವ್ಯಾಟಿಕನ್ ನಗರದಲ್ಲಿ ಸೇರಿದ್ದ ೧೫೫ ಕಾರ್ಡಿನಲ್‌ಗಳ ಸಭೆಯೊಂದರಲ್ಲಿ ಅವರು ವ್ಯಕ್ತಪಡಿಸಿರುವ ಈ ಅಭಿಪ್ರಾಯಗಳು ಪೋಪರ ವಿರುದ್ಧವಾಗಿ ಮಾಡಿದ ಆರೋಪಗಳಲ್ಲೆಲ್ಲ ಅತ್ಯಂತ ಬಲವಾದುವೆಂದು ಹೇಳಲಾಗಿದೆ. ಚರ್ಚಿನಲ್ಲಿ ಈಗಿರುವ ಏಕಚಕ್ರಾಧಿಪತ್ಯವು (*monorchy*) ಹೋಗಿ ಪ್ರಜಾಸತ್ತಾತ್ಮಕ ಆಡಳಿತವು ಬರಬೇಕೆಂಬುದು ಅನೇಕ ಕಾರ್ಡಿನಲ್‌ಗಳ ಮತ್ತು ಬಿಷಪ್ಪರ ಅಭಿಪ್ರಾಯವೂ ಆಗಿದೆ. ಆದರೆ ಡನ್ನೀಲ್ಸ್‌ರು ಧೈರ್ಯವಾಗಿ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಒಂದು ಧರ್ಮವು ಸಂಸ್ಥಾಬದ್ಧವಾದಾಗ ಆಡಳಿತಾತ್ಮಕ ವಿಷಯಗಳು ಪ್ರಾಧಾನ್ಯವನ್ನು ಪಡೆಯುವುದು ಸ್ವಾಭಾವಿಕ. ಆಗ ರಾಜಕೀಯ ಅಂಶಗಳೂ ಸಂಸ್ಥೆಯನ್ನು ಪ್ರವೇಶಿಸುತ್ತವೆ. ರಾಜಪ್ರಭುತ್ವ, ಪ್ರಜಾಪ್ರಭುತ್ವ, ಸಮಾಜವಾದ, ಕಮ್ಯೂನಿಸಂ ಮುಂತಾದ ವಿಷಯಗಳೂ ಆರ್ಥಿಕ ಮತ್ತು ಔದ್ಯೋಗಿಕ ವಿಷಯಗಳೂ ಹೆಡೆಯೆತ್ತುತ್ತವೆ. ಕ್ರಮೇಣ ಆ ಧಾರ್ಮಿಕ ಸಂಸ್ಥೆಯ ಮೂಲಪುರುಷನು ಯಾವ ಆದರ್ಶವನ್ನು ಎತ್ತಿಹಿಡಿದನೊ ಅದಕ್ಕೆ ವಿರುದ್ಧವಾದ ಆದರ್ಶಗಳೆ ಸಂಸ್ಥೆಯ ಪ್ರಧಾನ ಅಂಶಗಳಾಗಿಬಿಡುತ್ತವೆ. ಆದ್ದರಿಂದ ಆಧ್ಯಾತ್ಮಿಕ ಆದರ್ಶವನ್ನು ಎತ್ತಿ ಹಿಡಿಯುವುದು ಅತ್ಯಂತ ಮುಖ್ಯ. ಆ ಆದರ್ಶ ನಮ್ಮಲ್ಲಿ ಎಷ್ಟು ತೀವ್ರವಾಗಿರಬೇಕೆಂದರೆ ಬೇರೆ ಅಂಶಗಳೆಲ್ಲ ಅತ್ಯಂತ ಗೌಣವಾಗಬೇಕು, ಬೇರೆ ಅಂಶಗಳೆಲ್ಲವನ್ನೂ ಆಧ್ಯಾತ್ಮಿಕ ಅಳತೆಗೋಲಿನಿಂದ ಅಳೆಯುವಂತಾಗಬೇಕು. ❑

## ಸತ್ಯದೂರ ಸುದ್ದಿ

ಪತ್ರಿಕೋದ್ಯಮವೊಂದು ಅತ್ಯಂತ ಜವಾಬ್ದಾರಿಯ ಕೆಲಸ. ಪತ್ರಿಕೋದ್ಯಮಿಗಳಿಗೆ ಸಾಮಾಜಿಕ ಕಳಕಳಿ ಇರಬೇಕು, ಸಾಮಾಜಿಕ ಹಿತ ಅವರ ಧ್ಯೇಯವಾಗಿರಬೇಕು. ಅದಿಲ್ಲದಿದ್ದರೆ ಸಮಾಜಕ್ಕೆ ಅವರಿಂದ ಆಗುವ ಹಾನಿ ಅಷ್ಟಿಷ್ಟಲ್ಲ. ಅನೇಕ ಪತ್ರಿಕೋದ್ಯಮಿಗಳಿಗೆ ಪತ್ರಿಕೋದ್ಯಮವೊಂದು ಕುಚೋದ್ಯ, ಅತ್ಯಂತ ಬೇಜವಾಬ್ದಾರಿಯಿಂದ ವರದಿ ಮಾಡುತ್ತಾರೆ. ತಮ್ಮ ಬೇಜವಾಬ್ದಾರಿಯ ವರದಿಗಳಿಂದ ಸಮಾಜಕ್ಕೆ ಎಂತಹ ಹಾನಿಯನ್ನುಂಟುಮಾಡುತ್ತಿದ್ದೇವೆ ಎಂದು ಭಾವಿಸುವಷ್ಟು ಮಾನಸಿಕ ಪ್ರೌಢಿಮೆ ಅವರಿಗಿರುವುದಿಲ್ಲ.

“ರೀಡರ್ಸ್ ಡೈಜೆಸ್ಟ್” (*Readers' Digest*) ನಡೆಸಿದ ಸಂಶೋಧನೆಗಳ ಪ್ರಕಾರ ವಿವಿಧ ಪತ್ರಿಕೆಗಳಲ್ಲಿ ಬರುವ ವೈದ್ಯಕೀಯ ವರದಿಗಳಲ್ಲಿ ಹೆಚ್ಚಿನವು ಸತ್ಯದೂರವಾದವುಗಳು. ಅನವಶ್ಯಕವಾಗಿ ಜನರಲ್ಲಿ ಭೀತಿ ಹುಟ್ಟಿಸುವುದೇ ಇವುಗಳ ಉದ್ದೇಶವಾಗಿರುತ್ತದೆ. ಉದಾಹರಣೆಗೆ, “ಮೈಕ್ರೋವೇವ್ ಒಲೆಯಿಂದ ಕ್ಯಾನ್ಸರ್ ಉಂಟಾಗುತ್ತದೆ ಮತ್ತು ಆಹಾರದ ಮುಖ್ಯ ಪೌಷ್ಟಿಕಾಂಶಗಳಗಳನ್ನು ಅದು ನಾಶ ಮಾಡುತ್ತದೆ ಎಂಬುದು ವೈದ್ಯರ ಎಚ್ಚರಿಕೆ” ಎಂದು “ಡೈಲಿ ಎಕ್ಸ್‌ಪ್ರೆಸ್” ಎಂಬ ಪತ್ರಿಕೆ ವರದಿ ಮಾಡುತ್ತದೆ. ಆದರೆ, “ಮೈಕ್ರೋವೇವ್ ಒಲೆಯಿಂದ ತಯಾರಿಸಿದ ಆಹಾರ ಸೇವನೆಯಿಂದ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಿದೆ ಎಂಬುದಕ್ಕೆ ಯಾವ ವೈಜ್ಞಾನಿಕ ಪ್ರಮಾಣವೂ ಇಲ್ಲ” ಎಂದು ವಿಶ್ವ ಆರೋಗ್ಯ ಸಂಸ್ಥೆ (WHO) ತಿಳಿಸುತ್ತದೆ. ಹೀಗೆ ಅನೇಕ ವರದಿಗಳು ಪತ್ರಿಕೆಗಳಲ್ಲಿ ಬರುತ್ತವೆಯಂತೆ. “ಬ್ರಿಟಿಷ್ ಮೆಡಿಕಲ್ ಜರ್ನಲ್”ನ ಸಂಪಾದಕರು ಹೇಳುತ್ತಾರೆ: “ನಮಗೆ ಪ್ರತಿ ವರ್ಷ ಬರುವ ೬,೦೦೦ ವೈದ್ಯಕೀಯ ಅಧ್ಯಯನಗಳಲ್ಲಿ ನಾವು ಕೇವಲ ಶೇಕಡ ಹತ್ತನ್ನು ಮಾತ್ರ ಪ್ರಕಟಿಸುತ್ತೇವೆ.” ಪ್ರಸಿದ್ಧ ಪತ್ರಿಕೆಗಳಾದ “ನೇಚರ್” (Nature) ಮತ್ತು “ಬ್ರಿಟಿಷ್ ಮೆಡಿಕಲ್ ಜರ್ನಲ್”—ಈ ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳನ್ನು ಮಾತ್ರ ಗಂಭೀರವಾಗಿ ಸ್ವೀಕರಿಸಬಹುದು ಎಂದು “ರೀಡರ್ಸ್ ಡೈಜೆಸ್ಟ್” ಸೂಚಿಸುತ್ತದೆ.

ಬ್ರಿಟನ್ನಿನ ಸೋಶಿಯಲ್ ಇಷ್ಯೂಸ್ ರೀಸರ್ಚ್ ಸೆಂಟರ್”ನ ನಿರ್ದೇಶಕ ಡಾಯ್ ಪೀಟರ್ ಮಾರ್ಷ್ ಹೇಳುತ್ತಾರೆ: ಎರಡು ಬಗೆಯ ಜನರಿದ್ದಾರೆ—ಎಚ್ಚರಿಕೆಯ ಆಯಾಸದಿಂದ (*warning fatigue*)ನರಳುತ್ತಿರುವ ಕೆಲವರು ಆರೋಗ್ಯಕ್ಕೆ ಸಂಬಂಧಪಟ್ಟ ಯಾವುದೇ ಮಾಹಿತಿಗೂ—ಅದು ಒಳ್ಳೆಯದಾಗಲಿ ಕೆಟ್ಟದ್ದಾಗಲಿ—ಗಮನವನ್ನೇ ಕೊಡುವುದಿಲ್ಲ; ಮತ್ತು ಗಂಡಾಂತರದ ಗೀಳು (*risk factor phobia*) ಹಿಡಿದಿರುವ ಇನ್ನು ಅನೇಕರು ಭಯ ಹುಟ್ಟಿಸುವ ಎಲ್ಲ ವರದಿಗಳನ್ನೂ ಅತ್ಯಂತ ಗಂಭೀರವಾಗಿ ಸ್ವೀಕರಿಸುತ್ತಾರೆ.” ಈ ಎರಡೂ ಅತಿರೇಕಗಳಿಗೆ ನಾವು ಒಳಗಾಗಬಾರದು. ❑